ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ.

CHIKKABALLAPURA URBAN DEVELOPMENT AUTHORITY.

ಸಿಟ್ರಸ್ ಸಿಟಿ ಮೇಡೋಸ್, 4ನೇ ಸೆಕ್ಟರ್, ತುಮಕಲಹಳ್ಳಿ ಗ್ರಾಮ, ಚಿಕ್ಕಬಳ್ಳಾಪುರ-562101.

Email ID:cuda.cbpur@gmail.com

ದೂರವಾಣಿ ಸಂಖ್ಯೆ:08156-274501.

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಸಿಟ್ರಸ್‌ಸಿಟಿ ಮೇಡೋಸ್, 4ನೇ ಸೆಕ್ಟರ್,
ತುಮಕಲಹಳ್ಳಿ ಗ್ರಾಮ, ಬಿ.ಬಿ.ರಸ್ತೆ,
ಚಿಕ್ಕಬಳ್ಳಾಪುರ-562101.

ಸಂಖ್ಯೆ:ಚಿನಅಪ್ರಾ/ವಿನ್ಯಾಸ/90/2023-24/999 ದಿನಾಂಕ: 06 MAR 2024

:ವಸತಿಯೇತರ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ:

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಕವರ್ನಹಳ್ಳಿ ಗ್ರಾಮದ ಸ.ನಂ.150/3 ರಲ್ಲಿ 0ಎಕರೆ -23.08 ಗು ವಿಸ್ತೀರ್ಣದ ಜಮೀನಿಗೆ ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Services and Repairs of farm machinery and agricultural supplies ಉದ್ದೇಶದ ವಸತಿಯೇತರ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ಮನವಿ ದಿನಾಂಕ:21.12.2023.
2. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಅಧಿಕೃತ ಜ್ಞಾಪನ ಅರ್ಜಿ ಸಂಖ್ಯೆ:573340 ದಿನಾಂಕ:07.12.2023
3. ದಿನಾಂಕ:20.01.2024 ರಂದು ನಡೆದ ಪ್ರಾಧಿಕಾರದ 33ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.18 ರ ನಿರ್ಣಯ.
4. ಅರ್ಜಿದಾರರು ಶುಲ್ಕ ಪಾವತಿಸಿರುವ ದಿನಾಂಕ:15.02.2024 ಪ್ರಾಧಿಕಾರದ ರಶೀದಿ ಸಂಖ್ಯೆ:732.
5. ಅರ್ಜಿದಾರರು ಪ್ರಾಧಿಕಾರಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರ ದಿನಾಂಕ:20.12.2023.
6. ಪರಿತ್ಯಾಜನಾ ಪ್ರಮಾಣ ಪತ್ರದ ದಿನಾಂಕ: 27.02.2024

****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1) ರ ಪತ್ರದಲ್ಲಿ ಶ್ರೀಮತಿ ನಂಜಮ್ಮ ಕೋಂ ಲೇ॥ ರಾಮಪ್ಪ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಚಿಕ್ಕಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿ, ಕವರ್ನಹಳ್ಳಿ ಗ್ರಾಮದ ಸ.ನಂ.150/3 ರಲ್ಲಿ 0ಎಕರೆ -23.08 ಗು ವಿಸ್ತೀರ್ಣದ ಜಮೀನಿಗೆ ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Services and Repairs of farm machinery and agricultural supplies ಉದ್ದೇಶದ ವತಿಯೇತರ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಇವರು ಪ್ರಶ್ನಿತ ಜಮೀನನ್ನು Services and Repairs of farm machinery and agricultural supplies ಉದ್ದೇಶಕ್ಕಾಗಿ ಭೂಪರಿವರ್ತಿಸಿ ಉಲ್ಲೇಖ(2) ರಲ್ಲಿ ಅಧಿಕೃತ ಜ್ಞಾಪನ ಪತ್ರ ಹೊರಡಿಸಿರುತ್ತಾರೆ.

ದಿನಾಂಕ:20.01.2024 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:18ರಲ್ಲಿ ಪ್ರಸ್ತಾವನೆ ಸಂಬಂಧ ನಿಗಧಿತ ಶುಲ್ಕಗಳನ್ನು ಪಾವತಿಸಿಕೊಂಡು ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Services and Repairs of farm machinery and agricultural supplies ಉದ್ದೇಶದ ವಸತಿಯೇತರ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಅರ್ಜಿದಾರರು ಉಲ್ಲೇಖ(4) ರಲ್ಲಿ ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ದಿನಾಂಕ:14.02.2024 ರಂದು ಪಾವತಿಸಿರುತ್ತಾರೆ.

ಉಲ್ಲೇಖ(5) ರಲ್ಲಿ ಅರ್ಜಿದಾರರು ಸದರಿ ಜಮೀನಿನಲ್ಲಿ ಯಾವುದೇ ತಂಟೆ-ತಕರಾರು, ದೂರುಗಳು, ನ್ಯಾಯಲಯದಲ್ಲಿ ದಾವೆಗಳು, ಲೋಕಾಯುಕ್ತ ಪ್ರಕರಣಗಳು, ಡಿಕ್ರಿ ಇತರೆ ಯಾವುದೇ ಪ್ರಕರಣಗಳು ಇರುವುದಿಲ್ಲ ಪ್ರಮಾಣ ಪತ್ರವನ್ನು ದೃಢೀಕರಿಸಿ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಉಲ್ಲೇಖ (6)ರಲ್ಲಿ ವಿನ್ಯಾಸದಲ್ಲಿನ ರಸ್ತೆ ಪ್ರದೇಶಗಳನ್ನು ಉಪನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಕಚೇರಿ 1ನೇ ಪುಸ್ತಕದ ದಸ್ತಾವೇಜುನ ಸಂಖ್ಯೆ:ಸಿಕೆಬಿ-1-07695-2023-24 ದಿನಾಂಕ:27.02.2024 ರಂದು ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಲಾಗಿರುತ್ತದೆ.

ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Services and Repairs of farm machinery and agricultural supplies ಉದ್ದೇಶದ ವಸತಿಯೇತರ ಏಕನಿವೇಶನ ವಿನ್ಯಾಸ ನಕ್ಷೆಯಲ್ಲಿನ ಭೂ-ಉಪಯೋಗ ವಿಶ್ಲೇಷಣೆ ಈ ಕೆಳಕಂಡತ್ತಿರುತ್ತದೆ.

ಕ್ರ.ಸಂ.	ಭೂ-ಉಪಯೋಗ	ವಿಸ್ತೀರ್ಣ(ಚ.ಮೀ)	ಶೇಕಡ%
01	Services and Repairs of farm machinery and agricultural supplies	1765.51	81.27
02	ಉದ್ಯಾನವನ/ಬಫರ್	230.88	10.63
03	ವಾಹನ ನಿಲುಗಡೆ	115.42	05.31
04	ರಸ್ತೆ ವಿಸ್ತರಣೆಗಾಗಿ	60.63	02.79
	ಒಟ್ಟು	**2172.44**	**100.00**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 17 ರಡಿ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ(32) ರಡಿಯಲ್ಲಿ ವಸತಿ ವಿನ್ಯಾಸ ನಕ್ಷೆಗೆ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಲಾಗಿದೆ.

ಷರತ್ತುಗಳು:

1. ಪ್ರಶ್ನಿತ ಜಮೀನಿಗೆ ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Services and Repairs of farm machinery and agricultural supplies ಉದ್ದೇಶದ ವಸತಿಯೇತರ ಏಕನಿವೇಶನ ವಿನ್ಯಾಸನಕ್ಷೆ ಅನುಮೋದಿಸಲಾಗಿದ್ದು, ಈ ನಿವೇಶನವನ್ನು ಉಪವಿಭಾಗ ಮಾಡುವುದಾಗಲಿ, ನಿವೇಶನ ಅಳತೆಯನ್ನು ಮಾರ್ಪಾಡು ಮಾಡುವುದಾಗಲಿ ಮಾಡಕೂಡದು. ಒಂದು ವೇಳೆ ನಿವೇಶನವನ್ನು ಉಪವಿಭಜಿಸಬೇಕಾಗಿದ್ದಲ್ಲಿ ವಲಯ ನಿಯಮಾವಳಿಯನ್ವಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಂತೆ ಪ್ರಾಧಿಕಾರದ ಪೂರ್ವಾನುಮತಿ ಪಡೆಯತಕ್ಕದ್ದು.
2. **ಪ್ರಸ್ತಾವಿತ ವಿನ್ಯಾಸದಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವ ಮುನ್ನ ನಿಯಾನುಸಾರ ಅಗತ್ಯ ಶುಲ್ಕವನ್ನು ಪಾವತಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅವಲಗುರ್ಕಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ಇವರಿಂದ ಖಾತೆ ದಾಖಲು ಮಾಡಿಸಿಕೊಳ್ಳತಕ್ಕದ್ದು.**
3. ವಿನ್ಯಾಸದಲ್ಲಿ ಕಟ್ಟಡ ನಿರ್ಮಾಣ ಪ್ರಾರಂಭಿಸುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರಂತೆ ಕಡ್ಡಾಯವಾಗಿ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ತಾಂತ್ರಿಕ ಅಭಿಪ್ರಾಯ ಪಡೆಯತಕ್ಕದ್ದು.
4. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
5. ಈ ಪ್ರದೇಶದಲ್ಲಿ ಹಾಲಿ ಇರತಕ್ಕ ಗಿಡ ಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು.
6. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯ ಪ್ರಕರಣಗಳಿಗೆ/ಸಿವಿಲ್ ವ್ಯಾಜ್ಯಗಳಿಗೆ ಅರ್ಜಿದಾರರೇ ನೇರ ಜವಾಬ್ದಾರರಾಗಿರುತ್ತಾರೆ.
7. ಈ ಅನುಮೋದಿತ ವಿನ್ಯಾಸ ನಕ್ಷೆಯು ನಿಗಧಿಪಡಿಸಲಾದ ಮಾಪನ (ಸ್ಕೇಲ್)ದಲ್ಲಿ ವ್ಯತ್ಯಾಸ ಇರುವುದು ಕಂಡುಬಂದಲ್ಲಿ ಅದನ್ನು ಸೂಕ್ತವಾಗಿ ಸ್ಥಳದ ವಸ್ತು-ಸ್ಥಿತಿ ಹಾಗೂ ಅಳತೆ ಪರಿಮಾಣಕ್ಕೆ ಅನುಗುಣವಾಗಿ ಪರಿಷ್ಕೃತ ವಿನ್ಯಾಸನಕ್ಷೆ ಅನುಮೋದನೆ ಪಡೆದುಕೊಳ್ಳತಕ್ಕದ್ದು.

--3

8. ವಸತಿ ಏಕನಿವೇಶನ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲವೃದ್ದಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

10. ಈ ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ತಮ್ಮಿಂದ ಸಲ್ಲಿಸಲಾಗಿರುವ ಭೂ-ಮಾಲೀಕತ್ವ ದಾಖಲೆಗಳು, ಸರ್ವೆ ನಕ್ಷೆ, ಮತ್ತು ಖರಾಬು ಜಾಗೆಗಳ ಬಗ್ಗೆ ಮಾಹಿತಿ/ದಾಖಲೆ ಮತ್ತು ಇತರೆ ದಾಖಲೆ ಅಥವಾ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಅಥವಾ ಪೋರ್ಜರಿಯಾಗಿದ್ದಲ್ಲಿ ವಿನ್ಯಾಸನಕ್ಷೆ ನೀಡಿರುವ ಅಂಗೀಕಾರ ತಾನೇತಾನಾಗಿ ರದ್ದುಗೊಳ್ಳುತ್ತದೆ ಮತ್ತು ಸಂಬಂಧಿಸಿದವರ ವಿರುದ್ದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(4) ರಂತೆ ಕಾನೂನು ಕ್ರಮ ಜರುಗಿಸಲಾಗುವುದು ಹಾಗೂ ಒಟ್ಟಾರೆ ಪ್ರಸ್ತಾವನೆಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.

11. ವಿನ್ಯಾಸದಲ್ಲಿ ಕೊಳವೆ ಬಾವಿಗಳನ್ನು ತೆರೆಯುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು ಹಾಗೂ ತೆರೆದ ಕೊಳವೆ ಬಾವಿಯ ಬಗ್ಗೆ ಭೂಮಾಲೀಕರು ಹಾಗೂ ಸ್ಥಳೀಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿನಾಂಕ:30.01.2012 ಮತ್ತು ದಿನಾಂಕ:06.08.2014 ರಂದು ಸರ್ಕಾರ ನೀಡಿರುವ ನಿರ್ದೇಶನಗಳಂತೆ ತಪ್ಪದೆ ಕ್ರಮವಹಿಸತಕ್ಕದ್ದು.

12. ವಿನ್ಯಾಸದಲ್ಲಿ ಲಘು ವಿದ್ಯುತ್ ವಾಹಕ ತಂತಿಗಳು ಹಾದು ಹೋಗಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಸೂಕ್ತ ಜಾಗಕ್ಕೆ ಅಥವಾ ರಸ್ತೆ ಬದಿಗೆ ಸ್ಥಳಾಂತರಿಸತಕ್ಕದ್ದು ಹಾಗೂ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಈ ಕಛೇರಿಗೆ ಸಲ್ಲಿಸತಕ್ಕದ್ದು.

13. ಮೇಲೆ ತಿಳಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸುವುದಾಗಲಿ ಹಾಗೂ ಕಾಲಕಾಲಕ್ಕೆ ವಿಧಿಸುವ ಇತರೆ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ, ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

14. ವಿನ್ಯಾಸ ಅನುಮೋದನೆಗೆ ವ್ಯತಿರಿಕ್ತವಾಗಿ ಅಭಿವೃದ್ದಿ ಕಾಮಗಾರಿಯನ್ನು ಕೈಗೊಂಡಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(4) ಮತ್ತು ಕಲಂ 73 ರಡಿಯಲ್ಲಿ ಕ್ರಮಕೈಗೊಳ್ಳಲಾಗುವುದು.

ಸಹಿ/-

ಆಯುಕ್ತರು

ಚಿಕ್ಕಬಳ್ಳಾಪುರ ನಗರಾಭಿವೃದ್ದಿ ಪ್ರಾಧಿಕಾರ,

ಚಿಕ್ಕಬಳ್ಳಾಪುರ.

ಯಥಾ ಪ್ರತಿಯನ್ನು:

1. ಶ್ರೀ ಶ್ರೀಮತಿ ನಂಜಮ್ಮ ಕೋಂ.ಲೇ.ರಾಮಪ್ಪ, ಕವರ್ನಹಳ್ಳಿ ಗ್ರಾಮ, ಕಸಬಾ ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು. ಇವರಿಗೆ ಮಾಹಿತಿಗಾಗಿ ನೀಡಲಾಗಿದೆ.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅವಲಗುರ್ಕಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ಇವರಿಗೆ Services and Repairs of farm machinery and agricultural supplies ಏಕನಿವೇಶನ ವಿನ್ಯಾಸ ನಕ್ಷೆಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ನೀಡಲಾಗಿದೆ.
3. ಉಪನೋಂದಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4. ~~ಕಛೇರಿ ಕಡತಕ್ಕೆ.~~

ಆಯುಕ್ತರು

ಚಿಕ್ಕಬಳ್ಳಾಪುರ ನಗರಾಭಿವೃದ್ದಿ ಪ್ರಾಧಿಕಾರ,

ಚಿಕ್ಕಬಳ್ಳಾಪುರ

ಸೂಚನೆಗಳು:–

1. ಅರ್ಜಿದಾರರು ಟ್ರಾಕ್ಟರ್‌ಗಳನ್ನು ನಿರ್ವಹಣೆ, ಚಾಲಕರಿಗೆ ತರಬೇತಿ, ಚಾಲನಾ ಪರೀಕ್ಷೆಗಳನ್ನು ಮತ್ತು ಟ್ರಾಕ್ಟರ್‌ಗಳ ಕಾರ್ಯಾಚರಣೆಗೆ ಸಂಬಂಧಿಸಿದ ಸೇವೆಗಳನ್ನು ಒದಗಿಸಲು ಉದ್ದೇಶಿಸಿರುವ ಸ್ಥಳದ ಸ್ಪಷ್ಟ ಚಿತ್ರಣವನ್ನು ಸಲ್ಲಿಸಬೇಕು.
2. ಪ್ರಸ್ತಾವಿತ ಸೌಲಭ್ಯವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಕಸಬಾ ಹೋಬಳಿಯ ಮಲ್ಲಸಂದ್ರ ಗ್ರಾಮದ ಸರ್ವೆ ನಂ.150/3 ರಲ್ಲಿ ಒಟ್ಟು 2172.44 ಚ.ಮೀ ವಿಸ್ತೀರ್ಣದಲ್ಲಿ ಪ್ರಸ್ತಾವಿತ ಕಟ್ಟಡವನ್ನು ಹೊಂದಿರುತ್ತದೆ.
3. ಪ್ರಸ್ತಾವಿತ ಸೌಲಭ್ಯವು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳಿಂದ ಅಗತ್ಯವಿರುವ ಎಲ್ಲಾ ಅನುಮತಿಗಳನ್ನು ಪಡೆಯಬೇಕು ಮತ್ತು ಅನ್ವಯವಾಗುವ ಎಲ್ಲಾ ಕಾನೂನುಗಳು, ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು.
4. ಎಲ್ಲಾ ಅಳತೆಗಳು ಮೆಟ್ರಿಕ್ ಪದ್ಧತಿಯಲ್ಲಿವೆ.

ಕ್ರ.ಸಂ.	ಸರ್ವೆ ನಂ/ಉಪವಿಭಾಗ ಸಂಖ್ಯೆ	ಖರಾಬು ವಿಸ್ತೀರ್ಣ		ಉದ್ದೇಶಿತ ಪ್ರಸ್ತಾವನೆ	ಪ್ರಸ್ತಾವಿತ ಸೌಲಭ್ಯವು ಸಂಪೂರ್ಣವಾಗಿ ಅಥವಾ ಭಾಗಶಃ ಇರುವ ಗ್ರಾಮ ಪಟ್ಟಣ ಪ್ರದೇಶ ಸರ್ವೆ ನಂಬರ್‌ಗಳು
		"ಜಿ" ಖರಾಬು	"ಬಿ" ಖರಾಬು		
01	150/3	02-23.08 ಗಂ	-	02-23.08 ಗಂ	-
	ಒಟ್ಟು	02-23.08 ಗಂ	-	02-23.08 ಗಂ	-

ಸರ್ವೆ ನಂ.150/2

ಸರ್ವೆ ನಂ.150/1

ಸರ್ವೆ ನಂ.150/3

SERVICE AND REPAIR OF FARM MACHINERY AND AGRICULTURAL SUPPLIES ಅನ್ನು ನಿರ್ವಹಿಸಲು ಪ್ರಸ್ತಾವಿತ ಕಟ್ಟಡ

ಪ್ರಸ್ತಾವಿತ ಸೌಲಭ್ಯವು ಸಂಪೂರ್ಣವಾಗಿ ಅಥವಾ ಭಾಗಶಃ ಇರುವ ಗ್ರಾಮ ಪಟ್ಟಣ ಪ್ರದೇಶ ಸರ್ವೆ ನಂಬರ್‌ಗಳು

ಸರ್ವೆ ನಂ. ಗಡಿ

ಪ್ರಸ್ತಾವಿತ ಕಟ್ಟಡದ ಸುತ್ತಲಿನ ಗಡಿಗಳು

ಪ್ರಸ್ತಾವಿತ ಕಟ್ಟಡದ ವಿಸ್ತೀರ್ಣ = 2377.52 ಚ.ಮೀ ಅಥವಾ 00ಎಕರೆ-23.08 ಗುಂಟೆ
ಕಡಿತಗೊಳಿಸಬೇಕಾದ ವಿಸ್ತೀರ್ಣ = 0.00 ಚ.ಮೀ ಅಥವಾ 00ಗುಂಟೆ
ನಿವ್ವಳ ವಿಸ್ತೀರ್ಣ = 2377.52 ಚ.ಮೀ ಅಥವಾ 00ಎಕರೆ-23.08 ಗುಂಟೆ
ಸ್ಥಿರೀಕರಿಸಬೇಕಾದ ವಿಸ್ತೀರ್ಣ = 2172.44 ಚ.ಮೀ ಅಥವಾ 00ಎಕರೆ-21.08 ಗುಂಟೆ

ಭೂ ಬಳಕೆಯ ಪರಿವರ್ತನೆ

ಕ್ರ.ಸಂ	ಸಂಕೇತ	ಭೂ ಬಳಕೆಯ ವರ್ಗೀಕರಣ	ವಿಸ್ತೀರ್ಣ ಚ.ಮೀ.	ಶೇಕಡಾವಾರು (%)
1		SERVICE AND REPAIR OF FARM MACHINARY AND AGRICULTURAL SUPPLIES	1765.51	81.27
2		ಉದ್ಯಾನವನ/ಬಫರ್	230.88	10.63
3		ಪಾರ್ಕಿಂಗ್ ಪ್ರದೇಶ	115.42	05.31
4		ರಸ್ತೆ ವಿಸ್ತೀರ್ಣ	60.63	02.79
ಒಟ್ಟು			2172.44	100.00

- ದಿನಾಂಕ:20-01-2024 ರಲ್ಲಿ ನಡೆದ ಜಂಟಿ ಪರಿಶೀಲನೆಯಂತೆ 33 ನೇ ಸಾಮಾನ್ಯ ಸಭೆಯ ನಡವಳಿಕೆಯ ಠರಾವು(18) ರಲ್ಲಿ ಪ್ರಸ್ತಾವಿತ ಚಟುವಟಿಕೆಯಾದ SERVICE AND REPAIR OF FARM MACHINERY AND AGRICULTURAL SUPPLIES ಅನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆ.
- ಈ ಕಛೇರಿ ಪತ್ರ ಸಂಖ್ಯೆ:ಸ.ನಿ.ಪ್ರ/ಪ್ರಾಜ್ಞಾ/90/2023-24/ ದಿನಾಂಕ: /03/2024 ರಲ್ಲಿ ಪ್ರಸ್ತಾವಿತ SERVICE AND REPAIR OF FARM MACHINERY AND AGRICULTURAL SUPPLIES ಉದ್ದೇಶಗಳಿಗೆ ಜಮೀನನ್ನು ಪರಿವರ್ತನೆ ಮಾಡಿಕೊಡಲಾಗಿದೆ.

ತಹಶೀಲ್ದಾರ್ ದೊಡ್ಡಬಳ್ಳಾಪುರ ತಾಲ್ಲೂಕು

ಅಧಿಕೃತ ಸಹಿ

ಹುದ್ದೆ: ಸಹಾಯಕ ಆಯುಕ್ತರು

ಪ್ರತಿಯನ್ನು:
ಜಂಟಿ ನಿರ್ದೇಶಕರು ಕೃಷಿ ಮಾರುಕಟ್ಟೆ ಇಲಾಖೆ ದೊಡ್ಡಬಳ್ಳಾಪುರ ತಾಲ್ಲೂಕು
ಅಧ್ಯಕ್ಷರು ಪುರಸಭೆ ದೊಡ್ಡಬಳ್ಳಾಪುರ ತಾಲ್ಲೂಕು
ಸಹಾಯಕ ನಿರ್ದೇಶಕರು ಕೃಷಿ ಮಾರುಕಟ್ಟೆ ಇಲಾಖೆ ದೊಡ್ಡಬಳ್ಳಾಪುರ ತಾಲ್ಲೂಕು
ಪ್ರಸ್ತಾವಿತ ಸೌಲಭ್ಯವು ಪ್ರಸ್ತಾವಿತ ಕಟ್ಟಡದ ಸರ್ವೆ ನಂ.150/3 ರಲ್ಲಿ 00ಎಕರೆ-23.08 ಗುಂಟೆ ಜಮೀನಿನಲ್ಲಿ SERVICE AND REPAIR OF FARM MACHINERY AND AGRICULTURAL SUPPLIES ಅನ್ನು ನಿರ್ವಹಿಸಲು ಪರವಾನಿಗೆ ನೀಡಿದೆ.